Reg B G No. 155 ಶ್ರೀ 17 - 10 - 1968

ಪ್ರಮುಖ ವರ್ತಮಾನಗಳಿಗೆ
ಆಕರ್ಷಣೀಯ ಲೇಖನಗಳಿಗೆ
ಧಾರ್ಮಿಕ ವಿಚಾರಗಳಿಗೆ
ಸತ್ಯವಾದಿ ದಿನಪತ್ರಿಕೆಯನ್ನು ತಪ್ಪದೆ ಓದಿ
ಅದರಲ್ಲಿ ಜಾಹಿರಾತನ್ನು ಪ್ರಕಟಿಸಿ
ಸ್ಥಳದಲ್ಲಿ ತಿಂಗಳಿಗೆ ಚಂದಾ 40 ಪೈಸೆ
ಅಂಚೆವೆಚ್ಚ ಸೇರಿ ವರ್ಷಕ್ಕೆ ರೂ 16-00
ಸೋಮವಾರ ಸಂಚಿಕೆ ವರ್ಷಕ್ಕೆ ರೂ. 4

SATYAVADI, Daily MYSORE 4

ಸತ್ಯವಾದಿ

52 nd Year of Publication

ಸ್ಥಾಪಕರು : ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾವ್ ಸಂಪಾದಕ : ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣರಾವ್ [2 ಪೈಸೆ

ಒಂದೂಕಾಲು ಲಕ್ಷ ಕೇಂದ್ರ ನೌಕರರಿಂದ ಉಪವಾಸ

ಸತ್ಯವಾದಿ ಯ ಸ್ವರ್ಣೋತ್ಸವ

"ಸತ್ಯವಾದಿ" ಯ ಸ್ವರ್ಣೋತ್ಸವವನ್ನು ಬೇಗನೇ ನೆರವೇರಿಸಲಾಗುವುದು.

ರಾಷ್ಟ್ರಾಧ್ಯಕ್ಷರು, ಪ್ರಧಾನಿಯವರು, ಶ್ರೀಮನ್ಮಹಾರಾಜರು, ಮತ್ತಿತರ ಗಣ್ಯರು ಅಭಿನಂದಿಸಿ ಶುಭ ಕೋರಿರುವರು. ಶ್ರೀ ಶೃಂಗೇರಿ ಮತ್ತು ಶ್ರೀ ದ್ವಾರಕಾ ಜಗದ್ಗುರುಗಳವರು ಶುಭಾಶೀರ್ವಾದ ಮತ್ತು ಧನ ನೆರವು ಅನುಗ್ರಹಿಸಿರುವರು.

ರಾಜಸಭಾಭೂಷಣ ಶ್ರೀ ಎಫ್. ಕೆ ಇರಾನಿಯವರು, ಶ್ರೀ ಮಾಧವ್ ಶಿನ್ಯಾರವರು, ಶ್ರೀ ಎಂ. ಬಿ. ಬಸವಯ್ಯನವರು, ಆಪೆರಾ ಟಾಕೀಸಿನವರು, ಪದ್ಮಭೂಷಣ ನೇತ್ರದಾನಿ ಡಾ॥ ಎಂ.ಸಿ ಮೋದಿಯವರು ಡಾ ॥ ಆರ್. ಎಸ್. ನಂಜುಂಡಸ್ವಾಮಿ (ಗ್ಲಾಸ್ಕೊ) ಶಾಸ್ತ್ರಧರ್ಮನಿರತ ಶ್ರೀ ಅನಂತ ನರಸಿಂಹಯ್ಯಂಗಾರ್ (ಹೊಂಗನೂರು) ರವರೂ ಶುಭಾಶಯದೊಡನೆ ನೆರವು ನೀಡಿರುವರು.

ಪತ್ರಿಕೆಗಳ ಸ್ವರ್ಣೋತ್ಸವವು ಅತಿ ವಿರಳ ಮತ್ತು ಮೈಸೂರು ರಾಜ್ಯದಲ್ಲಿ ನಡೆದಂತೆಯೇ ಇಲ್ಲ.

ಸ್ವರ್ಣೋತ್ಸವದ ಪೂರ್ಣ ಯಶಸ್ಸಿಗೆ ಶುಭ ಸಂದೇಶಗಳನ್ನೂ, ಧನನೆರವನ್ನೂ ಆದರ ವಿಶ್ವಾಸಗಳಿಂದ ನೀಡಿ ಸಹಕರಿಸಬೇಕಾಗಿ ವಿನಂತಿಸಿ, ಈಡೇರುವದೆಂದು ಆಶಿಸಿ, ಕೃತಜ್ಞತಾಪೂರ್ವಕವಂದಿಸುತ್ತೇವೆ

ಸಂಪಾದಕ 'ಸತ್ಯವಾದಿ'
ಚಾಮರಾಜಪುರಂ, ಮೈಸೂರು 4.

ಇನ್ನೊಂದು ಸ್ವಾರಸ್ಯ

ಪಂಜಿಂ— ಸಾರಾಯಿ ಮಾರಾಟ ಕೂಡಿದ ಫಲಹಾರ ಮಂದಿರವನ್ನು ನವೆಂಬರು 5 ಮತ್ತು 6 ರಲ್ಲಿ ನಡೆಯುವ ಏಷಿಯಾಡ್ ಚಪ್ಪರದ ಹತ್ತಿರ ನಡೆಸಲು ಜೊಂಬಾಯಿನ ಮಸ್ಯ ಶಾಸಿಗಾರಿಯು ಸರಕಾರದ ಅನುಮತಿ ಕೇಳಿರುವನು.

ಡಾ ॥ ಮೋದಿ

ನೇತ್ರದಾನಿ ಪದ್ಮಭೂಷಣ ಡಾ ॥ ಎಂ. ಸಿ ಮೋದಿಯವರು ಬಳ್ಳಾರಿಯಲ್ಲಿ ತಾ ॥ 19 ರಂದು ನೇತ್ರ ಶಸ್ತ್ರಚಿಕಿತ್ಸಾ ಶಿಬಿರ ನಡೆಸುವರು.

ಪ್ರತಿಬಂಧ

ಬಮಾಕೊ— ಮಾಲೀ ರಾಷ್ಟ್ರೀಯರು ವಿದೇಶೀ ಪ್ರೆಸ್ ಏಜೆನ್ಸಿ ಮತ್ತು ಪತ್ರಿಕೆಗಳಲ್ಲಿ ಕೆಲಸಮಾಡುವ ಅಥವಾ ಸುದ್ದಿಗಾರರಾಗುವದನ್ನು ಪ್ರತಿಬಂಧಿಸಲಾಗಿದೆ.

ಸಂಬಳ ಹೆಚ್ಚುತ್ತದೆ

ಬೊಂಬಾಯಿ— ಬಡಕಾಸ್ ಪೇ ಕಮಿಷನ್ನಿನ ಶಿಫಾರಸನ್ನು ಮಹಾರಾಷ್ಟ್ರ ಸರಕಾರ ಜಾರಿಗೆ ತಂದಿದೆ — ಇದರಿಂದ ರಾಜ್ಯದ ನಾಲ್ಕೂವರೆ ಲಕ್ಷ ನೌಕರರು ರೂ. 30 ವರೆಗೆ ಸಂಬಳ ಹೆಚ್ಚುವುದು.

★

ರಿಜರ್ವ್ ಪೋಲೀಸ್

ಕಲ್ಲಿಕೋಟೆ— ಕೇಂದ್ರ ಕಚೇರಿ ಸಂರಕ್ಷಣೆಗೆ 100 ಕೇಂದ್ರ ರಿಜರ್ವ್ ಪೋಲೀಸರು ಬಂದಿರುವರು.

ಉಪವಾಸ

ನವದೆಹಲಿಯಲ್ಲಿ ನಿನ್ನೆ 125000 ನೌಕರರು ಕಚೇರಿಯಲ್ಲಿ, ಹೊರಗೆ ಮತ್ತು ಮನೆಗಳಲ್ಲಿ ಉಪವಾಸ ಆಚರಿಸಿದರೆಂದು ಹೇಳಲಾಗಿ — 6 ದಿವಸಗಳಿಂದ ಉಪವಾಸ ಮಾಡುತ್ತಿರುವ 4 ಮಂದಿ ಕೇಂದ್ರ ನೌಕರರ ನಾಯಿಕರ ಸ್ಥಿತಿ ಕಟ್ಟದೆ — ಗೃಹ ಮಂತ್ರಿಯವರ ಕಚೇರಿ ಮುಂದೆ ಸಾಮೂಹ ಪ್ರದರ್ಶನ ನಡೆಸಲಾಯಿತು — ಆಂಧ್ರ ಹೈದರಾಬಾದು ಮತ್ತಿತರ ಕಡೆಗಳಲ್ಲಿ ಮತ್ತು ಬೊಂಬಾಯಿ, ಮದರಾಸು, ಬೆಳಗಾಂನಲ್ಲಿ ಅನ್ನಸತ್ಯಾಗ್ರಹ ನಡೆಸಲಾಯಿತೆಂದು ವರದಿಯಾಗಿದೆ.

ಲಾಟರಿ

ನವದೆಹಲಿ— ರಾಜ್ಯಸರಕಾರಗಳು ಲಾಟರಿ ನಡೆಸುವದು ರಾಜ್ಯಾಂಗಕ್ಕೆ ವಿರೋಧವೆಂದು ನ್ಯಾಯಾಂಗ ಸಚಿವಾಲಯದ ಅಭಿಪ್ರಾಯವಾಗಿದೆ — ಅದನ್ನು ಶಾಸನಬದ್ಧವಾಗುವಂತಾಗಬೇಕು, ಅಥವಾ ಕೇಂದ್ರವೇ ನಡೆಸಿ ರಾಜ್ಯಗಳಿಗೆ ಉತ್ಪತ್ತಿ ಹಂಚಬೇಕು ಎನ್ನಲಾಗಿದೆ.

ದೀರ್ಘ ಕಾಲದ ಮುಷ್ಕರ

ನವದೆಹಲಿ— ಸೆಪ್ಟಂಬರು 19 ರ ಮುಷ್ಕರ ತಕ್ಕಮಟ್ಟಿಗಾದರೂ ನಡೆದರೆ, ಡಿಸೆಂಬರು 31 ರಿಂದ ದೀರ್ಘ ಕಾಲ ಮುಷ್ಕರ ನಡೆಸಲು ಕೇಂದ್ರ ನೌಕರರ ನಾಯಕರು ಮಾಡಿದ್ದ ಯೋಚನೆ ಕೇಂದ್ರಕ್ಕೆ ಅರಿವಾಗಿದೆ.

ಪ್ರಾಮಾಣೀಕತೆ

ಬೆಂಗಳೂರು — ಮೆಜಿಸ್ಟಿಕ್ ಸರ್ಕಲ್ ಹತ್ತಿರ ತಮಗೆ ಸಿಕ್ಕಿದ 900 ರೂ.ಗಳನ್ನು ವಿದ್ಯಾರ್ಥಿಗಳಾದ ಸತ್ಯನಾರಾಯಣ ಮತ್ತು ವೆಂಕಟೇಶರು ಪೋಲೀಸರಿಗೆ ಕೊಟ್ಟಿದ್ದಕ್ಕೆ ಅವರ ಪ್ರಾಮಾಣಿಕತೆ ಪ್ರಶಂಸಿಸಲಾಗಿದೆ.

● ಖುಟ್ಟಂಡು—ಸಿಂಧುನಾಲಚೌಕ ಗ್ರಾಮದ ಒಬ್ಬನು ಜೇನುಕಟ್ಟಿದ್ದ ಮರಕ್ಕೆ ಬೆಂಕಿ ಹತ್ತಿಸಲು, ಮೇಲಿನ ಜೇನುಹುಳುಗಳು ಹೊರಬಂದು ಕಚ್ಚಿ ಸಾಯಿಸಿದವು.

Mysore Dasara Exhibition 1968.

It is hereby informed to the Public that the Exhibition will be kept open exclusively for Royal Family visit on Friday the 18 th Octoder 1968 between 8.00 a. m. to 12 00 noon and Evening from 3 00 p. m. to 9.00 p m for Ladies only.

Sd/- R. Rajanna,
Secretary.

ಮೈಸೂರು ದಸರಾ ವಸ್ತುಪ್ರದರ್ಶನ 1968
ವಿಶೇಷ ಮನರಂಜನೆಯ ಕಾರ್ಯಕ್ರಮ
ದಿನಾಂಕ 19 ನೇ ಅಕ್ಟೋಬರ್ 1968 ನೇ
ಶನಿವಾರ ಸಂಜೆ 7 ಘಂಟೆಗೆ
ಕುಮಾರಿ ಚಂದ್ರಕಲಾ
ಮದ್ರಾಸ್‌ರವರಿಂದ
"ಅಮೋಘ ನೃತ್ಯ"
ವಸ್ತು ಪ್ರದರ್ಶನದ ಕಲಾಕ್ಷೇತ್ರದಲ್ಲಿ ಏರ್ಪಡಿಸಿರುತ್ತೆ.
ಪ್ರವೇಶ ದರ : 50 ಪೈಸೆ.

ಹಿಂದೂಗಳ ಆಚಾರ

ಗ್ರಾಹಕರು – ಶಾಸ್ತ್ರಧರ್ಮನಿರತ" ಅನಂತನರಸಿಂಹಯ್ಯಂಗಾರ್
(ಮುಂದುವರಿದುದು)

ಆಚಾರಕ್ಕೆ ಹೆಚ್ಚು ಗಮನಕೊಟ್ಟರೆ ಸಮಾಜದಲ್ಲಿ ಭಿನ್ನತೆ ಹೆಚ್ಚುವುದೇ ?

ಪ್ರಥಮ ಧರ್ಮವಾದ ಆಚಾರ ಮತ್ತು ಮೂರನೆಯದಾದ ಸಾಮಾನ್ಯ ಧರ್ಮಗಳು ಹಿಂದೂ ಸಮಾಜದ ಎಲ್ಲಾ ವ್ಯಕ್ತಿಗಳಿಗೂ ಸಮಾನವಾಗಿಯೇ ಇದೆ. ಆದರೆ ಆಚಾರವು ಸ್ವತಃ ಅನುಸರಿಸಬೇಕಾದ ಧರ್ಮವೇ ಹೊರತು ಪುಸ್ತಕದಲ್ಲಿರುವದಲ್ಲ. ಈ ಕಾರಣದಿಂದ ಆಚಾರವನ್ನು ಅನುಸರಿಸುತ್ತಿರುವ ಶ್ರದ್ಧೆ, ಅನುಕೂಲ, ವಾತಾವರಣ, ಇವುಗಳಿಂದ ಪ್ರತಿ ವ್ಯಕ್ತಿಯಲ್ಲಿಯ ಆಚಾರದಲ್ಲಿ ಭಿನ್ನತೆ ತೋರಬಹುದು.

ಹಿಂದೆ ತಿಳಿಸಿರುವ ನಾಲ್ಕು ಧರ್ಮಗಳನ್ನು ಒಂದೇ ವ್ಯಕ್ತಿ ಏಕಕಾಲದಲ್ಲಿ ಅನುಸರಿಸಬೇಕಾಗಿರುವುದರಿಂದ ಆಚಾರ ಧರ್ಮವಾವುದು, ವರ್ಣಾಶ್ರಮಧರ್ಮವಾವುದು, ಮೋಕ್ಷಧರ್ಮವಾವುದು ಎಂಬುದನ್ನು ಅರ್ಥಮಾಡಿಕೊಳ್ಳಲಾರದ ಜನರು ಆಚಾರದಲ್ಲಿ ಭಿನ್ನತೆ ಇದೆ ಎಂದು ಭಾವಿಸಬಹುದು. ಉದಾಹರಣೆಗಾಗಿ ಪ್ರತಿಯೊಬ್ಬರೂ ಹಣೆಗೆ ಪುಂಡ್ರವನ್ನು ಧರಿಸಬೇಕೆಂಬುದು ಆಚಾರ. ಇದು ಎಲ್ಲಾ ಹಿಂದುಗಳಿಗೂ ಸಮಾನವಾದ ವಿಧಿ. ಇದು ಮೋಕ್ಷಧರ್ಮದಿಂದ ಭಿನ್ನತೆಯುಂಟುಮಾಡುತ್ತದೆ. ಶೈವರಾದರೆ ತ್ರಿಪುಂಡ್ರವನ್ನೂ ವೈಷ್ಣವರಾದರೆ ಊರ್ಧ್ವಪುಂಡರವನ್ನೂ ಧರಿಸುತ್ತಾರೆ. ಪ್ರತಿಯೊಬ್ಬರೂ ಸಂಧ್ಯಾಕಾಲದಲ್ಲಿ ಸೂರ್ಯಾಭಿಮುಖವಾಗಿ ನಿಂತು ವಂದನೆಮಾಡಬೇಕೆಂಬುದು ಎಲ್ಲರಿಗೂ ಸಮಾನವಾದುದು. ದ್ವಿಜರು ಗಾಯತ್ರಿ ಜಪವನ್ನು ಮಾಡಬೇಕೆಂಬ ನಿಯಮವು ವರ್ಣಾಶ್ರಮಧರ್ಮಕ್ಕೆ ಸೇರಿದ್ದು.

Golden Jubilee of 'Satyavadi'

The golden jubilee of the 'Satyavadi' is to be celebrated very soon

The President, the Prime Minister, H.H. the Maharaja of Mysore, and other personages have extended messages of felicitations and good wishes. Sri Sringeri and Sri Dwaraka Jagadgurujis have favoured blessings and financial aid.

Rajasabha-bhushana Sri F. K. Irani, Sri M. B. Basaviah, Sri Madhav Shenoi, Sri Opera Talkies, Padmabhushana Dr. M. C. Modi, Dr. R. S. Nanjunda Swamy (Glasgow) Sri Ananthanarasimha Iyengar (Honganur) have generously extended donations and best wishes.

It is welknown that golden jubilee of newspapers in India is rare and almost unknown in Mysore State. The Prime Minister has expressed that it is no small achievement.

Hearty cooperation, extending of messages and donations and gracing the occasion with presence, are fervently solicited with grateful thanks.

Editor, 'Satyavadi' Chamarajapuram, Mysore 4.

Cow Slaughter should be banned Immediately

Help The Gorakshana

Edited, Printed & Published by Dharmaprachara Nirata M S Krishna Rao (Proprietor) at the Satyavadi Press Chamarajapuram, Mysoe 4

ವುಡ್‌ಲಾಂಡ್ಸ್ ಜನವರಿಯ 6 ನೇ ವಾರ
ವೈಭವ ಆರಂಭ

ಮನಮೋಹಕ ಹಿಂದಿ ಚಿತ್ರ — — ಈಸ್ಟ್‌ಮನ್ ಕಲರ್

ನೀಲ್ ಕಮಲ್ ★ Neel Kamal

.... ಮಿಲಿಯಗಟ್ಟಲೆ ಖರ್ಚಾಯಿನ ಅತ್ಯಾಕರ್ಷಣೀಯ ಹಿಂದಿ ಚಿತ್ರ ....
– ತಾರಾಗಣ— ವಹಿದಾ ರಹಿಮಾ, ಮನೂಜ್‌ಕುಮಾರ್, ರಾಜ್‌ಕುಮಾರ್
ಬಾಳ್‌ರಾಜ್ ಸಹಾನಿ, ಲಲಿತಾ ಪವಾರ್, ಡೇವಿಡ್, ಶಶಿಕಲಾ, ಮಹಮೂದ್

ಅಪೆರ— 11-10-68 ರಿಂದ

ಮನಮೋಹಕ ತಮಿಳು ಚಿತ್ರ — — ದಿನವಹಿ 3 ಆಟಗಳು

ನೇರ್‌ವಳಿ

ನಟವರ್ಗ– ಜಯಶಂಕರ್, ಆನಂದ್, ಮನೋಹರ್, ನಾಗೇಶ್, ಸುಂದರರಾಜ
ವಾಣಿಶ್ರೀ, ಚಂದ್ರಿಕಾ, ಮನೋರಮ, ವಿಜಯಲಲಿತ

Printing — Neat Binding

Lakshminarasimha Press

Sivarampet, Mysore

SHAKTI
SUDHA

A Superb Tonic

Protect the Cow



ಗೋರಕ್ಷಣೆ ಮತ್ತು ಪ್ರಾಣಿದಯಾ ಕಾರ್ಯಗಳು ಹೆಚ್ಚಿಗಾಗಿ ನಡೆಯಲಿ